

# ಆಕ್ಸಿಡೈಸ್ಡ್ ಒಡವೆ ಟ್ರೆಂಡ್

■ ಯು. ವೇಣೂರು

ಸಾಮಾನ್ಯವಾಗಿ ಸೆಲೆಬ್ರಿಟಿಗಳು, ಸಿನಿಮಾ, ಮಾಡೆಲಿಂಗ್ ತಾರೆಯರು ಉಟ್ಟ ಬಟ್ಟೆ, ತೊಟ್ಟ ಒಡವೆ ಎಲ್ಲವೂ ಫ್ಯಾಷನ್ ಟ್ರೆಂಡ್ ಅನ್ನೇ ಸೃಷ್ಟಿಸುತ್ತವೆ. ಫ್ಯಾಷನ್‌ಪ್ರಿಯ ಹಾಗೂ ಆಧುನಿಕ ಮನೋಭಾವದ ಮಹಿಳೆಯರಿಗೆ ಇವರೇ ರೋಲ್ ಮಾಡೆಲ್‌ಗಳು ಎನ್ನಬಹುದು. ತಮ್ಮ ಫ್ಯಾಷನ್ ಕಿಟ್‌ನಲ್ಲಿ, ಉಡುಪುಗಳ ಅಲ್ಮೆರಾಗಳಲ್ಲಿ ಟ್ರೆಂಡಿ ವಸ್ತುಗಳಿಗೇ ಹೆಚ್ಚಿನ ಆದ್ಯತೆ.

ಕೆಲ ಸಿನಿಮಾಗಳನ್ನೇ ನೋಡಿ. ಇಲ್ಲಿ ಸಿನಿನಟಿಯರು ತೊಟ್ಟ ಉಡುಗೆ–ಆಭರಣಗಳು ಕೆಲವೇ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಹಾಟ್‌ಕೇಕ್‌ಗಳಂತೆ ಸೇಲ್ ಆಗುತ್ತವೆ.

2018ರಲ್ಲಿ ಐಐಎಫ್‌ಎ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭ ನಡೆದ ವೇದಿಕೆಗೆ ನಟಿ ಶಾನ್ವಿ ಶ್ರೀವಾಸ್ತವ ಆ್ಯಕ್ಸಿಡೈಸ್ಡ್ ನೆಕ್ಲೇಸ್ ಆಭರಣ ತೊಟ್ಟು ಪ್ರಶಸ್ತಿ ಸ್ವೀಕರಿಸಿದರು. ಮುತ್ತು ಕಟ್ಟಿದ ಕಪ್ಪು ಬಣ್ಣದ ಬೆಳ್ಳಿ ಆ್ಯಕ್ಸಿಡೈಸ್ಡ್ ನೆಕ್ಲೇಸ್ ಕತ್ತಿನಲ್ಲಿ ಹೊಳೆಯುತ್ತಿದ್ದರೆ, ನವಿಲು ಬಣ್ಣದ ಸೀರೆಯಲ್ಲಿ ಶಾನ್ವಿ ಸುಂದರಿಯಾಗಿ ಕಂಗೊಳಿಸಿದರು.

ಅದಾಗಿ ಕೆಲವೇ ದಿನಗಳಲ್ಲಿ ಆಕ್ಸಿಡೈಸ್ಡ್ ಒಡವೆ ಟ್ರೆಂಡ್‌ಸೆಟ್ಟರ್ ಆಯಿತು. ಬಳಿಕ ಕೆಲಕಾಲ ತೆರೆಮರೆಯಲ್ಲೇ ಉಳಿದಿದ್ದ ಆಕ್ಸಿಡೈಸ್ಡ್ ಒಡವೆ ಇದೀಗ ಮತ್ತೆ ಹೊಸ ಸಂಚಲನ ಮೂಡಿಸುತ್ತಿದೆ.

ಹೌದು. ಆಕ್ಸಿಡೈಸ್ಡ್ ಒಡವೆ (**oxidised jewellery**) ಈಗಿನ ಹೊಸ ಟ್ರೆಂಡ್. ಸಂದರ್ಭ ಹಾಗೂ ಉಡುಪಿಗೆ ತಕ್ಕಂತೆ ಈ ಜ್ಯುವೆಲ್ಲರಿ ಅನ್ನು ಧರಿಸಬಹುದು.

‘ಈ ಮಾದರಿಯ ಒಡವೆ ಎಥ್ನಿಕ್ ಉಡುಪಿಗೆ ಅತ್ಯಂತ ಸೂಕ್ತವಾದದ್ದು. ಸೀರೆಗೆ ಆಕ್ಸಿಡೈಸ್ಡ್ ಸಿಲ್ವರ್ ಬಳೆ ಹಾಗೂ ಸಿಲ್ವರ್ ಟ್ರೈಬಲ್ ಚೋಕರ್ ಚೆನ್ನಾಗಿ ಕಾಣುತ್ತದೆ. ಮೂಗಿನ ನತ್ತು ಸಲ್ವಾರ್ ಧರಿಸಿದಾಗ ಸಖತ್ ಆಗಿ ಕಾಣುತ್ತದೆ. ಪಾಶ್ಚಾತ್ಯ ಉಡುಗೆಯ ಜೊತೆಗೆ ಸ್ಟೇಟ್‌ಮೆಂಟ್ ಇಯರ್ ರಿಂಗ್ಸ್ ಉತ್ತಮ ಕಾಂಬಿನೇಷನ್. ಜೀನ್ಸ್, ಡೆನಿಮ್, ರಿಪ್ಪಡ್, ಶಾರ್ಟ್ಸ್ ಮುಂತಾದವುಗಳನ್ನು ತೊಟ್ಟಾಗ ಆಕ್ಸಿಡೈಸ್ಡ್ ಒಡವೆ ಸೆಟ್ ಸೂಕ್ತ ಆಯ್ಕೆ’ ಎಂದು